**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 18-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 62/2023
DW-1

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದಃ ಇಲ್ಲ**

6) ಪಿರ್ಯಾದುದಾರರ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿರುವುದಿಲ್ಲ. ಈ ಪ್ರಕರಣದ ಚೆಕ್ಕನ್ನು ಪಿರ್ಯಾದುದಾರರು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ನನ್ನ ಮಾತು ಕೇಳಿ ಹಣ ಹೂಡಿಕೆ ಮಾಡಿದ್ದಕ್ಕಾಗಿ ನನ್ನಿಂದ ಭದ್ರತೆಗಾಗಿ ಪಡೆದಿರುತ್ತಾರೆ. ನಾನು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲಾ ಮಹಿಳಾ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದೆ. ಆ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. ಈಗ ಸದರಿ ಸಂಸ್ಥೆ ಬಂದಾಗಿರುತ್ತದೆ. ಹೀಗಾಗಿ ನನಗೆ ನೀಡಿದ ಕೋಡ ಅಸ್ತಿತ್ವದಲ್ಲಿ ಇರುವುದಿಲ್ಲ. ನಾನು 2022 ರಿಂದ 2023 ರ ವರೆಗೆ ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡಿರುತ್ತೇನೆ.

7) ನಾನು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಯಾರನ್ನು ಸದಸ್ಯರನ್ನಾಗಿ ಮಾಡಿರುವುದಿಲ್ಲ. ನಾನು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ಕೆಲಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದ ಚೆಕ್ಕನ್ನು

ಪಿರ್ಯಾದುದಾರರಿಗೆ ಭದ್ರತೆಗಾಗಿ ನೀಡಿರುತ್ತೇನೆ ಎಂದು ಸುಳ್ಳು ಪ್ರತಿರಕ್ಷೆ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಿರ್ಯಾದುದಾರರು ನನ್ನ ಮಾತು ಕೇಳಿಕೊಂಡು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡಿರುತ್ತಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಪಿರ್ಯಾದುದಾರರು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯ ಸದಸ್ಯತ್ವ ರಿನಿವಲ್ ಮಾಡಿಸಲು ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ಪಿರ್ಯಾದುದಾರರಿಗೆ ಮಾತ್ರ ತಾಲೂಕಾ ಕೋ-ಆರ್ಡಿನೇಟರ್ ಎಂದು ಮಾತ್ರ ಮಾಡಿದ್ದೆ.

8) ಒಂದು ವೇಳೆ ಪಿರ್ಯಾದುದಾರರು ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡಿದ್ದರೆ ಸದರಿ ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆ ಯವರು ಪಿರ್ಯಾದುದಾರರ ಖಾತೆಗೆ ಹಣ ಮರುಸಂದಾಯ ಮಾಡುತ್ತಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಿರ್ಯಾದುದಾರರು ನನ್ನ ಮಾತು ಕೇಳಿ ವಿ ಕೆ ಎಜ್ಯುಕೇಶನ ಶಿಕ್ಷಣ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡಿದ್ದಕ್ಕಾಗಿ ನನಗೆ ಒತ್ತಾಯ ಮಾಡಿರುವುದರಿಂದ ನಾನು ನನ್ನ ಖಾತೆಯಿಂದ ರೂ. 2,04,000/- ಹಣವನ್ನು ಪಿರ್ಯಾದುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಸದರಿ ಸಂಗತಿಯನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9) ನಾನು ಪಿರ್ಯಾದುದಾರರಿಗೆ ಹಣ ಮರುಪಾವತಿ ಮಾಡಿದ ನಂತರ ನನ್ನ ಎರಡು ಚೆಕ್ಕುಗಳನ್ನು ಮರಳಿ ನೀಡಲು ಕೇಳಿಕೊಂಡಿದ್ದರೂ ಸಹ ಪಿರ್ಯಾದುದಾರರು ನನಗೆ ಚೆಕ್ಕುಗಳನ್ನು ಮರಳಿ ನೀಡಿರುವುದಿಲ್ಲ. ಹಾಗೆ ಮರಳಿ ನೀಡದ ಕಾರಣ ನಾನು ಪಿರ್ಯಾದುದಾರರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ನಂಬಿಕೆ ಆಧಾರದ ಮೇಲೆ ಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಸಂಗತಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆ ಪಿರ್ಯಾದುದಾರರು ನನ್ನ ಚೆಕ್ಕುಗಳನ್ನು ಮರಳಿ ನೀಡದೆ ಇದ್ದಾಗ ನಾನು ನನ್ನ ಖಾತೆ ಇರುವ ಬ್ಯಾಂಕಿಗೆ ಹೋಗಿ ಪಿರ್ಯಾದುದಾರರಿಗೆ ನೀಡಿದ ಎರಡು ಚೆಕ್ಕುಗಳನ್ನು ನಗದೀಕರಣಕ್ಕಾಗಿ ಹಾಜರು ಪಡಿಸಿದರೆ ತಡೆಹಿಡಿಯಬೇಕು ಎಂದು ಕೋರಿ ಯಾವುದೇ ಅರ್ಜಿ ನೀಡಿಲ್ಲ ಎಂದರೆ ಸರಿ.

10) ನಾನು ಹಾಗೂ ನನ್ನ ಗಂಡ ಪಿರ್ಯಾದುದಾರರಿಗೆ ಭೇಟಿ ಆಗಿ ನಮ್ಮ ಅವಶ್ಯಕತೆಗಳಿಗಾಗಿ ಪಿರ್ಯಾದುದಾರರ ಕಡೆಯಿಂದ ರೂ. 6,00,000/- ಕೈಗಡ ಹಣವನ್ನು ಪಡೆದುಕೊಂಡಿದ್ದೇವು ಎಂದರೆ ಸರಿಯಲ್ಲ. ಈಗ ನಾನು ಸರಕಾರದ ಸೌಲಭ್ಯಗಳು ಜನರಿಗೆ ತಲುಪಿಸುವ ಸಮಾಜಸೇವೆ ಕೆಲಸ ಮಾಡುತ್ತಿದ್ದೇನೆ.

11) ನಿಪಿ-5 ರ ತಲುಪೋಪ್ಪಿಗೆಯ ಮೇಲೆ ಇರುವ ಸಹಿ ನನ್ನದೆ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-3 ರ ನೋಟಿಸು ನನಗೆ ಜಾರಿಯಾಗಿದ್ದರೂ ಸಹ ನಾನು ನೋಟಿಸು

ಜಾರಿಯಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ರಮೇಶ ರಾಚಪ್ಪಾ ಭುಜಂಗನವರ ಸಮಕ್ಷಮ ಉಳಿದ ರೂ. 9,000/- ಹಣವನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆ ಎಂದು ಸುಳ್ಳು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.